GTTC
GOVERNMENT TOOL ROOM & TRAINING CENTRE
SKILL FOR THE TECHNOLOGY OF THE FUTURE

# ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ

**ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು-560010 ದೂರವಾಣಿ: 080-23384303**
**ಫ್ಯಾಕ್ಸ್: 080-23301683 ವೆಬ್‌ಸೈಟ್: https://karunadu.karnataka.gov.in/gttc**

ಉಲ್ಲೇಖ : ಜಿಟಿಟಿಸಿ/ಟಿಆರ್‌ಜಿ/ಗುತ್ತಿಗೆ/ಪ್ರಾಂಶುಪಾಲರು/2020-21/03 ದಿನಾಂಕ: 08.09.2020

## ಗುತ್ತಿಗೆ ಆಧಾರದ ಮೇಲೆ 'ಪ್ರಾಂಶುಪಾಲರು' ಬೇಕಾಗಿದ್ದಾರೆ

ಜಿಟಿಟಿಸಿ, ಪ್ರಮುಖ ತಾಂತ್ರಿಕ ತರಬೇತಿ ಕೇಂದ್ರವಾಗಿದ್ದು, ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ (ಎಸ್‌ಡಿಇಎಲ್) ಕಾರ್ಯನಿರ್ವಹಿಸುತ್ತಿದೆ. ಜಿಟಿಟಿಸಿ ಸಂಸ್ಥೆಯು ಯುವಜನರಿಗೆ ದೀರ್ಘಾವಧಿ ಕೋರ್ಸ್‌ಗಳಾದ 'ಟೂಲ್ ಮ್ಯಾನ್ಯುಫ್ಯಾಕ್ಚರಿಂಗ್', 'ಪ್ರಿಸಿಷನ್ ಮ್ಯಾನ್ಯುಫ್ಯಾಕ್ಚರಿಂಗ್', 'ಎಲೆಕ್ಟ್ರಾನಿಕ್ಸ್' ಮತ್ತು 'ಮೆಕಟ್ರಾನಿಕ್ಸ್' ಕ್ಷೇತ್ರದಲ್ಲಿ ಕೌಶಲ್ಯಾಧಾರಿತ ತರಬೇತಿ ನೀಡುವುದಲ್ಲದೇ ಅಲ್ಪಾವಧಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಸಹ ನಡೆಸುತ್ತಿದೆ.
ಜಿಟಿಟಿಸಿ ತನ್ನ ತರಬೇತಿ ಕೇಂದ್ರಗಳಲ್ಲಿ 'ಪ್ರಾಂಶುಪಾಲರ' ಹುದ್ದೆಗಳಿಗೆ ಸಂವಹನ ಕಲೆ, ನಾಯಕತ್ವದ ಗುಣ, ಸಮಸ್ಯೆಯನ್ನು ಪರಿಹರಿಸುವ ಮನೋಸ್ಥಿತಿಯುಳ್ಳ ತಾಂತ್ರಿಕ ಪರಿಣಿತಿ ಹೊಂದಿರುವ ಹಾಗೂ ಟೂಲ್‌ರೂಮ್ ಮತ್ತು ಟ್ರೈನಿಂಗ್ ಸೆಂಟರ್ ಚಟುವಟಿಕೆಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿರುವ ಪ್ರತಿಭಾವಂತ ಅಪೇಕ್ಷಿತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಸ್ಥಳ | ತಿಂಗಳಿಗೆ ಕ್ರೋಢೀಕೃತ ಸಂಭಾವನೆ | ವಯೋಮಿತಿ (ಕನಿಷ್ಠ/ಗರಿಷ್ಠ ವರ್ಷಗಳು) | ಶೈಕ್ಷಣಿಕ ವಿದ್ಯಾರ್ಹತೆ | ಅನುಭವ |
|---|---|---|---|---|---|---|---|
| 01 | ಪ್ರಾಂಶುಪಾಲರು | 05 | ಕೂಡಲಸಂಗಮ, ಯಾದಗಿರಿ, ಕೊಪ್ಪಳ, ಕನಕಪುರ, ಗೌರಿಬಿದನೂರು. | ರೂ.50,000/- | 28-63 ವರ್ಷಗಳು | ಎಐಸಿಟಿಇಯಿಂದ ಮಾನ್ಯತೆ ಪಡೆದಿರುವ ಸಂಸ್ಥೆಯಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್‌ಗೆ ಸಂಬಂಧಪಟ್ಟ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. ಪದವಿ ಅಥವಾ ಸ್ನಾತಕೋತ್ತರ ಪದವಿ ಯಾವುದಾದರೂ ಒಂದರಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರಬೇಕು. | **ಕೈಗಾರಿಕಾ ಅನುಭವ:**ಟೂಲ್‌ರೂಮ್/ ಮ್ಯಾನ್ಯುಫ್ಯಾಕ್ಚರಿಂಗ್/ಆಟೋಮೇಷನ್ ಕೈಗಾರಿಕೆಯಲ್ಲಿ 5 ವರ್ಷಗಳು. ಅಥವಾ 5 ವರ್ಷಗಳು ಬೋಧನಾ ಅನುಭವ, ಎಐಸಿಟಿಇಯಿಂದ ಮಾನ್ಯತೆ ಪಡೆದ ಅಧಿಕೃತ ಇಂಜಿನಿಯರಿಂಗ್ ಕಾಲೇಜು/ಕೇಂದ್ರಗಳಲ್ಲಿ ಹೊಂದಿರಬೇಕು. |

- **ಆಯ್ಕೆಯ ವಿಧಾನ:** ವಿದ್ಯಾರ್ಹತೆ ಮತ್ತು ಅನುಭವ, ಮೆರಿಟ್ ಕಮ್ ರೋಸ್ಟರ್ ವ್ಯವಸ್ಥೆಯ ಆಧಾರದ ನಂತರ ತಾಂತ್ರಿಕ ಸಂದರ್ಶನ.
- **ಗುತ್ತಿಗೆ ಅವಧಿ: ಒಂದು ವರ್ಷ,** ವ್ಯಕ್ತಿಯ ಕಾರ್ಯಕ್ಷಮತೆಯ ಮೌಲ್ಯಮಾಪನದ ಆಧಾರದ **ಮೇಲೆ ಗರಿಷ್ಠ 3 ವರ್ಷಗಳವರೆಗೆ** ವಿಸ್ತರಿಸಬಹುದಾಗಿದೆ.
- ಅರ್ಜಿಗಳನ್ನು ವೆಬ್‌ಸೈಟ್:**https://karunadu.karnataka.gov.in/gttc** ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು-560010 ಕ್ಕೆ ಕಳುಹಿಸತಕ್ಕದ್ದು, ಲಕೋಟೆಯ ಮೇಲ್ಭಾಗದ ಎಡಬದಿಯಲ್ಲಿ **'ಪ್ರಾಂಶುಪಾಲರು'** ಹುದ್ದೆಗೆ ಎಂದು ನಮೂದಿಸತಕ್ಕದ್ದು. ಸಂದರ್ಶನದ ವೇಳೆಯಲ್ಲಿ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ತರುವುದು.
- ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:23.09.2020 ಸಂಜೆ 5.30.ಗಂಟೆಯೊಳಗೆ.**
- ಸಂದರ್ಶನದ ದಿನಾಂಕ ಮತ್ತು ಸ್ಥಳಕ್ಕೆ ಸಂಬಂಧಿಸಿದ ಮಾಹಿತಿಯನ್ನು Short list ಮಾಡಲಾದ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.
- **ಅಕ್ಟೋಬರ್ 2020ರ 2ನೇ ವಾರದಲ್ಲಿ** ಸಂದರ್ಶನ ನಡೆಸುವ ಸಾಧ್ಯತೆ ಇದೆ.
- ಆಯ್ಕೆಯಾದ ಅಭ್ಯರ್ಥಿಗಳನ್ನು ಕರ್ನಾಟಕದ ಯಾವುದೇ ಜಿಲ್ಲೆಯಲ್ಲಾದರೂ ನಿಯುಕ್ತಿಗೊಳಿಸಬಹುದು.
- ಅಭ್ಯರ್ಥಿಗಳು ಕನ್ನಡ ಭಾಷೆಯಲ್ಲಿ ಬರೆಯುವ ಮತ್ತು ಮಾತನಾಡುವ ಸಾಮರ್ಥ್ಯ ಹೊಂದಿರಬೇಕು.
- ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್: **https://karunadu.karnataka.gov.in/gttc** ನೋಡುವುದು.
- ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸುವುದು:ಉಪ ವ್ಯವಸ್ಥಾಪಕರು-ಆಡಳಿತ, ದೂರವಾಣಿ ಸಂಖ್ಯೆ:080-23384303, ವ್ಯವಸ್ಥಾಪಕರು-ತರಬೇತಿ: 080-23385386

**''ಆಯ್ಕೆ ವಿಧಾನವನ್ನು ಮುಂದುವರೆಸುವ/ರದ್ದುಗೊಳಿಸುವ ಎಲ್ಲಾ ಹಕ್ಕುಗಳನ್ನು ಆಡಳಿತ ಮಂಡಳಿ ಕಾಯ್ದಿರಿಸಿದೆ.''**

**ಸಹಿ/- ವ್ಯವಸ್ಥಾಪಕ ನಿರ್ದೇಶಕರು**